# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2699 |
| ಉತ್ತರಿಸಬೇಕಾದ ದಿನಾಂಕ | : | 25.03.2022 |
| ಸದಸ್ಯರ ಹೆಸರು | : | ಶ್ರೀಮತಿ ವೀಣಾ ಅಚ್ಚಯ್ಯ |
| ಉತ್ತರಿಸುವ ಸಚಿವರು | : | ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ | REPLY |
|---|---|---|---|
| ಅ) | ಕ್ರೀಡಾ ಕಲಿಗಳ ತವರು ಎಂದೇ ಖ್ಯಾತಿ ಪಡೆದಿರುವ ಕೊಡಗು ಜಿಲ್ಲೆಯಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪಿಸಬೇಕೆನ್ನುವ ಬೇಡಿಕೆ ಬಹುದಿನದಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. | YES. |
| ಆ) | ಬಂದಿದ್ದಲ್ಲಿ, ಕೊಡಗು ಜಿಲ್ಲೆಯಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳುವುದೇ; | ಕರ್ನಾಟಕದಲ್ಲಿ ಕ್ರೀಡಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ್ದು, ಪಿ.ಪಿ.ಪಿ. ಮಾದರಿಯಲ್ಲಿ ತುಮಕೂರಿನಲ್ಲಿ ಸ್ಥಾಪಿಸಲು ಆಸಕ್ತಿ ಅಭಿವ್ಯಕ್ತಪಡಿಸುವಿಕೆ (Expression of Interest) ಯನ್ನು ಉನ್ನತ ಶಿಕ್ಷಣ ಇಲಾಖೆಯಿಂದ ಆಹ್ವಾನಿಸಲಾಗಿತ್ತು. ಆದರೆ ಖಾಸಗಿಯವರಿಂದ ಯಾವುದೇ ಪ್ರಕ್ರಿಯೆ ಬರದೇ ಇರುವುದರಿಂದ ಕ್ರೀಡಾ ವಿ.ವಿ. ಸ್ಥಾಪನೆ ಪ್ರಕ್ರಿಯೆಗೆ ಚಾಲನೆ ಸಿಕ್ಕಿರುವುದಿಲ್ಲ. ಬೆಂಗಳೂರು ಹೊರತುಪಡಿಸಿ ಬೇರೆ ಜಿಲ್ಲಾಕೇಂದ್ರಗಳಲ್ಲಿ ಪಿ.ಪಿ.ಪಿ. ಮಾದರಿಯಲ್ಲಿ ಸ್ಥಾಪಿಸಲು ಖಾಸಗಿಯವರು ಮುಂದೆ ಬರುವ ಸಾಧ್ಯತೆ ಇರುವುದಿಲ್ಲ.<br><br>ಆದ್ದರಿಂದ ಪ್ರಸ್ತುತ ಬೆಂಗಳೂರಿನಲ್ಲಿ 100 ಎಕರೆ ಜಾಗದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ. ಇಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪಿಸಿದ ನಂತರ ಕೊಡಗು ಜಿಲ್ಲೆಯಲ್ಲಿ ಕ್ರೀಡಾ ವಿಶ್ವ ವಿದ್ಯಾಲಯ ವಿಭಾಗೀಯ ಕಛೇರಿ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು. | It was announced in the Budget for the year 2018-19 to establish Sports University in Karnataka and Higher Education Department has invited Expression of Interest to establish Sports University in Tumkur under PPP Model. But the process of establishing Sports University has not gained momentum as no response was received from Private parties. There is no chances of private parties coming forward to establish it at district levels except Bengaluru.<br><br>Therefore, at present it is intended to Establish Sports University in Bengaluru in an area of 100 acres under PPP Model. After establishing Sports University in Bengaluru, the proposal to establish Divisional Office of Sports University in Kodagu District would be examined. |

| | | | |
|---|---|---|---|
| **ಇ)** | ಕೊಡಗು ಜಿಲ್ಲೆಯಲ್ಲಿ ಕ್ರೀಡೆಗಳಿಗೆ ಉತ್ತೇಜನ ನೀಡುವ ಸಲುವಾಗಿ, ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು; ಅವುಗಳಿಗೆ ಒದಗಿಸಿರುವ ಅನುದಾನ ವಿವರಗಳೇನು; | ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ 05 ಕಾಮಗಾರಿಗಳಿಗೆ ಒಟ್ಟು **ರೂ.611.20** ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ವಿವರವನ್ನು **ಅನುಬಂಧ-1 ರಲ್ಲಿ** ಒದಗಿಸಿದೆ. | An amount of **Rs. 611.20** Lakhs has been released to 05 works undertaken in Kodagu District during the last three years, details are furnished in **Annexure-1.** |
| **ಈ)** | ಜಿಲ್ಲೆಯಲ್ಲಿ, ಪ್ರಸ್ತುತ ಪ್ರಗತಿಯ ಹಂತದಲ್ಲಿ ಎಷ್ಟು ಕಾಮಗಾರಿಗಳಿವೆ; ಹಾಗೂ ಸದರಿ ಪ್ರಗತಿಯ ಹಂತದಲ್ಲಿರುವ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಬೇಕಾಗಿರುವ ಅನುದಾನದ ವಿವರಗಳೇನು; ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು? | ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಪ್ರಗತಿಯಲ್ಲಿರುವ 06 ಕಾಮಗಾರಿಗಳನ್ನು ಪೂರ್ಣಗೊಳಿಸಲು **ರೂ.157.00** ಲಕ್ಷಗಳು ಅಗತ್ಯವಿರುತ್ತದೆ. ಸದರಿ ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಿದೆ.<br><br>ಬಾಕಿ ಇರುವ ಅನುದಾನವನ್ನು ಕಾಮಗಾರಿಯ ಪ್ರಗತಿಯನ್ನಾಧರಿಸಿ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. | For 06 ongoing works an amount of Rs. 157.00 Lakhs is required for completion. The details are furnished in **Annexure- 2.**<br><br>Action will be taken for release of remaining grants based on the progress of the work. |

**ವೈಎಸ್‌ಡಿ/ಇಬಿಬಿ/83/2022**

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2699**

## ಅನುಬಂಧ-1

### ಕಳೆದ ಮೂರು ವರ್ಷಗಳಲ್ಲಿ (2018-19, 2019-20 & 2020-21) ಕೊಡಗು ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ | 2018-19 | 2019-20 | 2020-21 | ಪ್ರಸ್ತುತ ಹಂತ |
|---|---|---|---|---|---|---|
| 1 | ಮಡಿಕೇರಿಯಲ್ಲಿ ಬಾಲಕಿಯರ ಕ್ರೀಡಾ ವಸತಿ ನಿಲಯದ ಕಟ್ಟಡ ದುರಸ್ಥಿ ಹಾಗೂ ಪೆವಿಲಿಯನ್ ಕಟ್ಟಡಕ್ಕೆ ಬಣ್ಣ ಬಳಿಯುವುದು. | 30.00 | 25.00 | 7.34 | - | ಕಾಮಗಾರಿ ಪೂರ್ಣಗೊಂಡಿದೆ |
| 2 | ಕೊಡಗು ಜಿಲ್ಲೆ ವಿರಾಜಪೇಟೆಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ | 326.00 | 24.33 | 131.85 | - | ಅಂದಾಜು ಪಟ್ಟಿಯಂತೆ ಕಾಮಗಾರಿ ಮುಕ್ತಾಯಗೊಂಡಿದೆ |
| 3 | ಕೊಡಗು ಜಿಲ್ಲೆ ಕೂಡಿಗೆಯಲ್ಲಿ ಸಿಂಥೆಟಿಕ್ ಹಾಕಿ ಟರ್ಫ ನಿರ್ಮಾಣ. | 402.00 | 68.68 | 48.17 | - | ಕಾಮಗಾರಿ ಪೂರ್ಣಗೊಂಡಿದೆ |
| 4 | ಕೊಡಗು ಜಿಲ್ಲೆ ಕೂಡಿಗೆ ಕ್ರೀಡಾಶಾಲೆಯ ಆವರಣದಲ್ಲಿಅಳವಡಿಸಿರುವ ಹಾಕಿ ಟರ್ಫ್ ಹೆಚ್ಚುವರಿ ವಿದ್ಯುತ್ ಸಂಪರ್ಕ ಪಡೆಯುವುದು. | 1.64 | - | - | 1.64 | ಕಾಮಗಾರಿ ಪೂರ್ಣಗೊಂಡಿದೆ |
| 5 | ಕೊಡಗು ಜಿಲ್ಲೆ ಸೋಮವಾರ ಪೇಟೆಯಲ್ಲಿ ಸಿಂಥೆಟಿಕ್ ಹಾಕಿ ಟರ್ಫ್ ನಿರ್ಮಾಣ. | 434.23 | - | 44.64 | 259.55 | ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. |
| | **ಒಟ್ಟು** | **1193.87** | **118.01** | **232.00** | **261.19** | |

# ಅನುಬಂಧ-2

## ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಅನುದಾನದ ವಿವರ

| ಕ್ರ. ಸಂ | ಕಾಮಗಾರಿ ವಿವರ | **ಅನುಮೋದನೆ ನೀಡಿರುವ** ಮೊತ್ತ (ರೂ.ಲಕ್ಷಗಳಲ್ಲಿ) | ಇಲ್ಲಿಯವರೆಗೂ ಬಿಡುಗಡೆಮಾಡಿರುವ ಅನುದಾನ (ರೂಲಕ್ಷಗಳಲ್ಲಿ) | ಅವಶ್ಯವಿರುವ ಬಾಕಿ ಅನುದಾನ (ರೂಲಕ್ಷಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|
| 1 | ಕೊಡಗು ಜಿಲ್ಲೆ ಕೂಡಿಗೆಯಲ್ಲಿ ಕ್ರೀಡಾ ಶಾಲೆಯ ಬಾಲಕರ ವಸತಿ ನಿಲಯ ಕಟ್ಟಡ ದುರಸ್ಥಿ | 49.50 | 45.00 | 4.50 | ಕಾಮಗಾರಿ ಪ್ರಗತಿಯಲ್ಲಿದೆ |
| 2 | ಕೊಡಗು ಜಿಲ್ಲೆ ಕೂಡಿಗೆಯಲ್ಲಿ ವಸತಿ ಗೃಹ ನವೀಕರಣ ಕಾಮಗಾರಿ | 49.90 | 45.00 | 4.90 | ಕಾಮಗಾರಿ ಪ್ರಗತಿಯಲ್ಲಿದೆ |
| 3 | ಕೊಡಗು ಜಿಲ್ಲೆ ವಿರಾಜಪೇಟೆಯಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಒಳಾಂಗಣ ಕ್ರೀಡಾಂಗಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವುದು, ರಸ್ತೆ, ಚರಂಡಿ, ಇಂಟರ್ ಲಾಕ್, ಅಲ್ಯುಮಿನಿಯಂ ಕಿಟಕಿಗಳನ್ನು ಅಳವಡಿಸುವುದು, ಶೌಚಾಲಯಗಳ ನಿರ್ಮಾಣ ಹಾಗೂ ಇತರೆ ಅವಶ್ಯಕ ಹೆಚ್ಚುವರಿ ಕಾಮಗಾರಿಗಳು | 44.37 | 30.00 | 14.37 | ಕಾಮಗಾರಿಯನ್ನು ಪ್ರಾರಂಭಿಸಬೇಕಿದೆ |
| 4 | ಕೊಡಗು ಜಿಲ್ಲೆ ಸೋಮವಾರ ಪೇಟೆಯಲ್ಲಿ ಸಿಂಥೆಟಿಕ್ ಹಾಕಿ ಟರ್ಫ ಅಳವಡಿಸುವ ಕಾಮಗಾರಿ | 434.23 | 354.00 | 80.23 | ಕಾಮಗಾರಿ ಮುಕ್ತಾಯದ ಹಂತದಲ್ಲಿದೆ |
| 5 | ಕೊಡಗು ಜಿಲ್ಲೆಯ ಬರ್ಪೊಳೆಯಲ್ಲಿ ವೈಟ್‌ವಾಟರ್ ರ್‍ಯಾಫ್ಟಿಂಗ್ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ಸದರಿ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಕುರಿತು | 98.00 | 45.00 | 53.00 | ಕಾಮಗಾರಿ ಪ್ರಗತಿಯಲ್ಲಿದೆ. |
| 6 | ಮಡಿಕೇರಿಯಲ್ಲಿ ಹೊಸದಾಗಿ ಕ್ರೀಡಾ ವಸತಿ ನಿಲಯದ ನಿರ್ಮಾಣ | 233.40 | 83.33 | - | ಕಾಮಗಾರಿ ಪ್ರಾರಂಭಿಸಬೇಕಾಗಿದೆ |
| | ಒಟ್ಟು | **909.40** | **602.33** | **157.00** | |